**ಡಿ.ಡಬ್ಲೂ–1**

**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 4548/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ನಿಂಗರಾಜು |
| ತಂದೆಯ ಹೆಸರು | : | ನಿಂಗಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೊಸಹೊಳಲು, ಹೆಚ್.ಡಿ ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 13.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಆರೋಪಿ ಪರ ಶ್ರೀ ಎಂ.ವಿ, ವಕೀಲರಿಂದಃ**

ಫಿರ್ಯಾದುದಾರರು ಯಾರು ಎಂದು ನನಗೆ ಗೊತ್ತಿಲ್ಲ. ಹೆಚ್ ಡಿ ಕೋಟೆಯ ಸಿದ್ದಪ್ಪಾಜಿ ರಸ್ತೆಯಲ್ಲಿರುವ ಹುಚ್ಚಯ್ಯ ಎಂಬುವವರಿಂದ ರೂ.75,000/- ಹಣ ಪಡೆದು ಚೆಕ್ಕನ್ನು ಕೊಟ್ಟಿದ್ದು, ನಂತರ ಸದರಿ ಹಣವನ್ನು ವಾಪಸ್ ಕೊಟ್ಟಿರುತ್ತೇನೆ, ಆದರೆ ಅವರು ಚೆಕ್ ಕೊಡುತ್ತೇನೆಂದು ಹೇಳಿ ಕೊಟ್ಟಿರುವುದಿಲ್ಲ. ನನಗೆ ವಕೀಲರಿಂದ ನೋಟಿಸ್ ಬಂದ ನಂತರ ಹುಚ್ಚಯ್ಯುರವರ ಮನೆಗೆ ಹೋಗಿ ಹಣ ಕೊಟ್ಟಿದ್ದೇನೆ, ಪುನಃ ಏಕೆ ನೋಟಿಸ್ ಕಳುಹಿಸಿರುತ್ತೀರಿ ಎಂದು ಕೇಳಿದಾಗ ಚೆಕ್ಕನ್ನು ಹುಡುಕಿ ಕೊಡುತ್ತೇನೆ ಎಂದು ಹೇಳಿ ನನ್ನ ಬಳಿ ಇದ್ದ ನೋಟಿಸ್ ನ ಪ್ರತಿಯನ್ನು ಅವರೇ ಇಟ್ಟುಕೊಂಡಿರುತ್ತಾರೆ. ನಂತರ ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿರುತ್ತದೆ. ನಂತರ ಸಮನ್ಸ್ ತೆಗೆದುಕೊಂಡು ಹುಚ್ಚಯ್ಯುರವರ ಮನೆಗೆ ಹೋದಾಗ ನ್ಯಾಯಾಲಯಕ್ಕೆ ಹೋಗಿ ಕೇಳಿ ಎಂದು ಹೇಳಿರುತ್ತಾರೆ. ನಾನು ಫಿರ್ಯಾದುದಾರರಿಂದ ಯಾವುದೇ ವ್ಯವಹಾರ ಇಟ್ಟುಕೊಂಡಿಲ್ಲವಾದ್ದರಿಂದ ದೂರನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಿ.ಡಬ್ಲೂ-1**

**<u>ಫಿರ್ಯಾದುದಾರರು ಮತ್ತು ಅವರ ಪರ ವಕೀಲರು ಗೈರುಹಾಜರಿರುತ್ತಾರೆಃ- </u> ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**